# ಸ್ನೇಹ ಸಂಪತ್ತು ಪುಸ್ತಕ ಬಿಡುಗಡೆ

▪ **ವಿಕ ಸುದ್ದಿಲೋಕ** ಬೆಂಗಳೂರು

**ಕಾರ್ಯಕ್ರಮ:** ಎಂ. ನರಸಿಂಹವ 'ಮೂರ್ತಿ ಬರೆ ದಿರುವ ಚಿತ್ರನಟ ಡಾ. ವಿಷ್ಣುವರ್ಧನ್ ಜೀವನ ಚರಿತ್ರೆ 'ಸ್ನೇಹ ಸಂಪತ್ತು' ಪುಸ್ತಕ ಬಿಡುಗಡೆ.

**ಎಲ್ಲಿ? ಯಾವತ್ತು?:** ನ್ಯಾಷನಲ್ ಪದವಿ ಕಾಲೇಜು. ಭಾನುವಾರ

**ಯಾರಿಂದ:** ನ್ಯಾಷನಲ್ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘ, ಮಾಧ್ಯಮ ಕ್ರಿಯೇಷನ್ಸ್ ಗಿರಿನಗರ.

**ಯಾರಿದ್ದರು:** ಚಿತ್ರನಟಿ ಭಾರತಿ ವಿಷ್ಣುವರ್ಧನ್, ನಟ ಎಂ.ಕೆ. ಸುಂದರ್‌ರಾಜ್, ಸಂಘದ ಅಧ್ಯಕ್ಷೆ ಡಾ.ಎಂ. ಲೀಲಾವತಿ, ಬೆಂಗಳೂರು ದೂರದರ್ಶನ ಕೇಂದ್ರದ ಹಿರಿಯ ನಿರ್ದೇಶಕ ಡಾ. ಮಹೇಶ್ ಜೋಶಿ, ಚಿತ್ರನಟ ಕೂದವಳ್ಳಿ ಚಂದ್ರಶೇಖರ್, ನ್ಯಾಷನಲ್ ಕಾಲೇಜು ಸೊಸೈಟಿ ಆಫ್ ಕರ್ನಾಟಕ ಪ್ರಭಾರ ಅಧ್ಯಕ್ಷ ಡಿ.ಎನ್. ಆನಂದ್.

**ಯಾರು, ಏನೆಂದರು?**

ವಿಷ್ಣುವರ್ಧನ್ ಗೆಳೆಯರ ಮತ್ತು ಅವರ ಕಾಲೇಜಿನ ಪ್ರೀತಿಯ ಅನುಭವದಿಂದ ಮುತ್ತಾಗಿ ಪೋಣಿಸಿದಂತೆ ಪುಸ್ತಕ ಬಂದಿದೆ. ಅವರ ಸ್ನೇಹ ಸಂಪತ್ತು ಹೀಗೆ ಮುಂದುವರಿಯಲಿ.

**- ಭಾರತಿ ವಿಷ್ಣುವರ್ಧನ್**

ವಿಷ್ಣುವರ್ಧನ್ ನ್ಯಾಷನಲ್ ಕಾಲೇಜಿನಲ್ಲಿ ನಮ್ಮ ಜತೆ ಕುಮಾರ್ ಆಗಿ ಬೆಳೆದ. ವಿಷ್ಣು ಹಾಕಿದ ಹೆಜ್ಜೆ, ಹಾಡು, ನಟನೆ ಈಗಲೂ ನೆನಪಿಗೆ ಬರುತ್ತವೆ. ಅವನು ಇನ್ನೂ ನಮ್ಮ ಜತೆ ಇರಬೇಕಿತ್ತು.

**- ಎಂ.ಕೆ. ಸುಂದರ್‌ರಾಜ್**

ನ್ಯಾಷನಲ್ ಕಾಲೇಜಿನ ಮಣ್ಣಿನ ಗುಣವೇ ಅಂಥದ್ದು. ಇಲ್ಲಿ ಅನೇಕ ಪ್ರತಿಭಾವಂತರು ರೂಪುಗೊಂಡಿದ್ದಾರೆ. ಮೇರು ವ್ಯಕ್ತಿತ್ವದ ವಿಷ್ಣುವರ್ಧನ್ ಈ ಕಾಲೇಜಿನಲ್ಲಿ ಓದಿದ್ದ ಎಂಬುದೇ ಹೆಮ್ಮೆಯ ವಿಷಯ.

**- ಡಾ.ಎಂ. ಲೀಲಾವತಿ**